ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ:– ನವಿಲು ತೀರ್ಥ ಡ್ಯಾಮ್‌ನಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಸ್ಥಳ ಯಾವುದೂ ಇಲ್ಲ. • ಅದೂ ಸಂಪೂರ್ಣವಾಗಿ ನೀರಾವರಿ ಇಲಾಖೆಯ ಹಿಡಿತದಲ್ಲಿರುವುದರಿಂದ ನೀರಾವರಿ ಇಲಾಖೆಗೆ ಸೇರಿದ ನೂರಾರು ಕ್ವಾಟ್ರಸ್‌ಗಳು ಖಾಲಿ ಇವೆ. ಆ ಡ್ಯಾಂ ಸಂಪೂರ್ಣವಾಗಿ ರಕ್ಷಿತ ಪ್ರದೇಶವಾಗಿರುವುದರಿಂದ ನೀವು ಪೊಲೀಸ್ ಇಲಾಖೆಯಿಂದ ಕಟ್ಟುವವರೆಗೂ ನೀರಾವರಿ ಇಲಾಖೆಯ ಸಚಿವರ ಹತ್ತಿರ ಅಥವಾ ಸಂಬಂಧಪಟ್ಟವರ ಜೊತೆ ಮಾತನಾಡಿ, ಅಲ್ಲಿ ಯಾರು ಡ್ಯೂಟಿ ಮೇಲೆ ಇರುತ್ತಾರೆ, ಅವರಿಗೆ ಆ ಕ್ವಾಟ್ರಸ್‌ಗಳನ್ನು ಕೊಡಿಸಬೇಕೆನ್ನುವ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:– ಆಯಿತು.

ಅಧ್ಯಕ್ಷರು:– ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ದಿನಾಂಕ 14.05.2015 ರ ಹನ್ನೆರಡನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 180 ಪ್ರಶ್ನೆಗಳ ಪೈಕಿ 95 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ–1)

ಶ್ರೀ ಅಧ್ಯಕ್ಷರು:– ಮಂಡಿಸಲಾಗಿದೆ. ಈಗ ವರದಿಯನ್ನೊಪ್ಪಿಸುವುದು.